## ಸ್ವಾಮಿ ಅಭೇದಾನಂದಜಿ ಅವರ ಶ್ರೀಶಾರದಾ ಸ್ತೋತ್ರದಿಂದ

ದೇವೀಂ ಪ್ರಪನ್ನಾಂ ಪ್ರಣತಾರ್ತಿಹಂತ್ರೀಂ
ಯೋಗೀಂದ್ರಪೂಜ್ಯಾಂ ಯುಗಧರ್ಮಪಾತ್ರೀಮ್।
ತಾಂ ಶಾರದಾಂ ಭಕ್ತಿವಿಜ್ಞಾನದಾತ್ರೀಂ
ದಯಾಸ್ವರೂಪಾಂ ಪ್ರಣಮಾಮಿ ನಿತ್ಯಮ್ ॥

"ಪ್ರಸನ್ನಳೂ, ಶರಣಾಗತರ ದುಃಖವನ್ನು ನಾಶ ಮಾಡುವವಳೂ, ಯೋಗೀಂದ್ರರಿಂದ ಪೂಜಿಸಲ್ಪಡುವವಳೂ, ಯುಗಧರ್ಮವನ್ನು ರಕ್ಷಿಸುವವಳೂ, ಭಕ್ತಿ ವಿಜ್ಞಾನಗಳನ್ನು ಕೊಡುವವಳೂ, ದಯಾಸ್ವರೂಪಳೂ ಆಗಿರುವ ಶ್ರೀಶಾರದಾದೇವಿಯನ್ನು ನಿತ್ಯವೂ ನಾನು ನಮಸ್ಕರಿಸುತ್ತೇನೆ."



ಪ್ರಸೀದ ಮಾತರ್ವಿನಯೇನ ಯಾಚೇ
ನಿತ್ಯಂ ಭವ ಸ್ನೇಹವತೀ ಸುತೇಷು ।
ಪ್ರೇಮೈಕಬಿಂದುಂ ಚಿರದಗ್ಧಚಿತ್ತೇ
ವಿಷಿಂಚ ಚಿತ್ತಂ ಕುರು ನಃ ಸುಶಾಂತಮ್ ॥

"ಎಲೈ ತಾಯಿಯೇ, ನಮ್ಮ ಮೇಲೆ ಪ್ರಸನ್ನಳಾಗು ಎಂದು ವಿನಯಪೂರ್ವಕವಾಗಿ ಬೇಡುತ್ತೇವೆ. ಮಕ್ಕಳ ಮೇಲೆ ಯಾವಾಗಲೂ ಸ್ನೇಹವುಳ್ಳವಳಾಗು. ಚಿರಕಾಲದಿಂದ ಬಂದು ಬಳಲಿದ ನಮ್ಮ ಮನಸ್ಸಿನಲ್ಲಿ ಒಂದು ಪ್ರೇಮಬಿಂದುವನ್ನು ಚಿಮುಕಿಸಿ ನಮ್ಮ ಮನಸ್ಸನ್ನು ಶಾಂತಗೊಳಿಸು."

## ಗೃಹಸ್ಥರಿಗೆ ಸಾಂತ್ವನಸುಧೆ

ಮಗು, ನೀನು ಸಂಸಾರದಲ್ಲಿ ಇದ್ದರೆ ತಾನೇ ಏನಂತೆ? ಸಂಸಾರದಲ್ಲಿ ಇರುವುದು ಎಂದರೆ ನಿನ್ನ ಪಾಲಿಗೆ ಮರದ ನೆರಳಿನಲ್ಲಿ ಇದ್ದಂತೆ. ಸಂಸಾರವೇನು ದೇವರಿಂದ ಬೇರೆಯೇ? ದೇವರು ಎಲ್ಲೆಲ್ಲೂ ಇದ್ದಾನೆ... ದೇವರು ನಿನ್ನನ್ನು ಎಲ್ಲಿಟ್ಟಿರುವನೋ ಅಲ್ಲೇ ತೃಪ್ತಿಯಿಂದಿರು. ದೇವರನ್ನು ಕರೆಯುವುದು, ಅವನನ್ನು ಪಡೆಯುವುದು, ಇದೇ ಗುರಿ. ನೀನು ಅವನನ್ನು ಕರೆದರೆ, ಅವನು ಕೈಹಿಡಿದು ನಡೆಸುತ್ತಾನೆ. ಅವನನ್ನು ನಂಬು. ನಿನಗೆ ಯಾವ ಭಯವೂ ಇರುವುದಿಲ್ಲ.

ಯಾವ ಹೆಂಗಸರು ಸಂಸಾರದ ಜವಾಬ್ದಾರಿಯನ್ನು ಹೊತ್ತು, ಗಂಡ-ಮಕ್ಕಳನ್ನೂ ನೋಡಿಕೊಂಡು ಭಗವಂತನನ್ನು ಕರೆಯುತ್ತಾರೋ, ಅವರಿಗೆ ಖಂಡಿತ ಅವನ ದರ್ಶನವಾಗುತ್ತದೆ. ಅಷ್ಟೇ ಅಲ್ಲ, ಅವರು ಭಗವಂತನನ್ನು ಬೇಗನೆ ಪಡೆದುಬಿಡುತ್ತಾರೆ.

ನಿನ್ನ ಸಂಸಾರ ಶ್ರೀರಾಮಕೃಷ್ಣರಿಗೆ ಸೇರಿದ್ದು. ನೀನು ಶ್ರೀರಾಮಕೃಷ್ಣರಿಗೆ ಸೇರಿದವನು. ನೀನು ಶ್ರೀರಾಮಕೃಷ್ಣರ ಸಂಸಾರದಲ್ಲಿ, ಶ್ರೀರಾಮಕೃಷ್ಣರ ಕೆಲಸ ಮಾಡುತ್ತಿದ್ದೀಯೆ ಎಂದು ಭಾವಿಸು.

ನಿಮ್ಮ ಸಂಸಾರ ಭಗವಂತನದೇ. ಆತನು ನಿಮ್ಮನ್ನು ಎಲ್ಲೇ ಇಟ್ಟಿರಲಿ, ಅವನನ್ನೇ ನಂಬಿಕೊಂಡು, ನಿಮ್ಮಿಂದ ಸಾಧ್ಯವಾದಷ್ಟೂ ಚೆನ್ನಾಗಿ ಕೆಲಸ ಮಾಡಿ... ದುಃಖ, ತೊಂದರೆ ಬಂದಾಗಲೆಲ್ಲ ಶ್ರೀರಾಮಕೃಷ್ಣರನ್ನು ಕೂಗಿ ಕರೆಯಿರಿ. ಅವರು ನಿಮಗೆ ದಾರಿ ತೋರುತ್ತಾರೆ.

ನಿನ್ನ ತಂದೆ-ತಾಯಿಗಳನ್ನು ಹರ-ಗೌರಿಯರೆಂಬ ಭಾವದಿಂದ ಸೇವೆ ಮಾಡು. ಇದರಿಂದ ನಿನ್ನ ಮನಸ್ಸು ಉತ್ತಮಗೊಳ್ಳುತ್ತದೆ.

## ಅಂತರಂಗ

**ಮೇಲೆ ಮುಗ್ಧೆಯ ರೀತಿ, ನಟನೆಯೇನಲ್ಲ: ಪ್ರಶಾಂತ ಸಾಗರ; ಒಳಗೆ ಮುತ್ತು ರತ್ನ ಪ್ರವಾಳಗಳ ತಳೆದ ಪ್ರಮಿದ್ಧೆ; ವಾತ್ಸಲ್ಯ ಭೂಗರ್ಭದಲಿ ವಜ್ರಗಳ ವ್ರಾತ ! ರಾಮಕೃಷ್ಣ ಗುರು ಗುರುತಿಸಿದ, ಗೌರವಿಸಿದ ಚೇತನ, ಮಹಾಯೋಗಿಯನು ಸಂಸಾರಜಾಲಕೆಳೆಯದೆ ಲೋಕ-ಕರ್ಷಿಸಿದ ತ್ಯಾಗಸಂಪನ್ನೆ! ಶಾಶ್ವತಕನ್ಯೆ-ಯಾಗಿಯೂ ಎಲ್ಲರಿಗೆ ತಾಯಾದ ಸೋಜಿಗದ ಪರಿ! ಪರಮಹಂಸಿ ಎಂದರೆ ಒಪ್ಪದೇ? ಹಿಂದೆ ಇರದ, ಅರ್ವಾಚೀನ ಮಹಿಳಾವತಾರ; ತಾ-ರಕ ಸತ್ತ್ವ ! ಸರಳ ಬಂಧುರ ಭಾಷ್ಯ ಭಾರತದ ಶ್ರೀಪರಂಪರೆಗೆ ! ಪದ ಭೂಮಕ್ಕೆ ತೆರೆದ ಕದ !**

*– ಡಾ. ಸಿ.ಪಿ.ಕೆ.*

ಮಕ್ಕಳು ನಾರಾಯಣನಿದ್ದಂತೆ; ಅವರನ್ನು ಅದೇ ಭಾವನೆಯಿಂದ ನೋಡಿಕೊಳ್ಳಬೇಕು.

ಶ್ರೀಮಂತರು ಹಣದ ಮೂಲಕ ದೇವರ, ಭಕ್ತರ ಸೇವೆ ಮಾಡಬೇಕು. ಬಡವರು ನಾಮಜಪದಿಂದ ದೇವರನ್ನು ಪೂಜಿಸಬೇಕು.

ಸಾಧನೆಯ ವಿಚಾರದಲ್ಲಿ ಗಂಡಹೆಂಡಿರ ನಡುವೆ ಪರಸ್ಪರ ಒಪ್ಪಿಗೆ ಇದ್ದರೆ, ಆಧ್ಯಾತ್ಮಿಕ ಜೀವನದಲ್ಲಿ ಮುಂದುವರೆಯುವುದು ಸುಲಭ.

*– ಶ್ರೀಮಾತೆ ಶಾರದಾದೇವಿ*